International Journal of Kannada Research 2022; 8(4): 105-108




International Journal of Kannada Research
www.kannadajournal.com

**ISSN: 2454–5813**
IJKR 2022; 8(4): 105-108
© 2022 IJKR
www.kannadajournal.com
Received: 27-08-2022
Accepted: 30-09-2022

**ಡಾ.ಕೆ.ಶಿವಾನಂದಯ್ಯ**
ಪ್ರಾಧ್ಯಾಪಕರು
ಸ್ನಾತಕೋತ್ತರ ಕನ್ನಡ ವಿಭಾಗ ಸರ್ಕಾರಿ ಕಲಾ ಕಾಲೇಜು (ಸ್ವಾಯತ್ತ), ಚಿತ್ರದುರ್ಗ-577501
ಕರ್ನಾಟಕ, ಭಾರತ

**Corresponding Author:**
**ಡಾ.ಕೆ.ಶಿವಾನಂದಯ್ಯ**
ಪ್ರಾಧ್ಯಾಪಕರು
ಸ್ನಾತಕೋತ್ತರ ಕನ್ನಡ ವಿಭಾಗ ಸರ್ಕಾರಿ ಕಲಾ ಕಾಲೇಜು (ಸ್ವಾಯತ್ತ), ಚಿತ್ರದುರ್ಗ-577501
ಕರ್ನಾಟಕ, ಭಾರತ

# ಚಿನುಆ ಅಚಿಬೆಯ 'ಭಂಗ' ಕಾದಂಬರಿ: ವಸಾಹತುಶಾಹಿಯ ಸಂಕೀರ್ಣ ಕಥನ

**ಡಾ.ಕೆ.ಶಿವಾನಂದಯ್ಯ**

## ಪೀಠಿಕೆ

ಚಿನುಆ ಅಚಿಬೆಯ 'ಥಿಂಗ್ಸ್ ಫಾಲ್ ಅಪಾರ್ಟ್' ಕಾದಂಬರಿಯನ್ನು ಡಾ.ಸಿ.ನಾಗಣ್ಣ ಅವರು 'ಭಂಗ' ಎಂಬ ಹೆಸರಿನಲ್ಲಿ ಕನ್ನಡಕ್ಕೆ ಅನುವಾದಿಸಿದ್ದಾರೆ. 'ಥಿಂಗ್ಸ್ ಫಾಲ್ ಅಪಾರ್ಟ್' ಕಾದಂಬರಿ ಇಪ್ಪತ್ತೈದು ಅಧ್ಯಾಯಗಳಿದ್ದು, ಮೂರು ಭಾಗಗಳಲ್ಲಿ ಆವರಿಸಿದೆ. ಬ್ರಿಟಿಶ್ ಕಾದಂಬರಿಕಾರರು ಆಫ್ರಿಕಾವನ್ನು 'ಕಗ್ಗತ್ತಲೆಯ ಖಂಡ' ಎಂದು ಚಿತ್ರಿಸಿದ್ದಲ್ಲದೆ ಆಫ್ರಿಕಾದ ಜನರು ಅನಾಗರಿಕರು, ಮೌಢ್ಯದಿಂದ ಹೊರಬರಲಾರದವರು ಎಂದೆಲ್ಲಾ ಬರೆದಿದ್ದನ್ನು ಗಮನಿಸಿದ ಅಚಿಬೆ ಆಫ್ರಿಕಾದ ಬಗೆಗೆ ಬ್ರಿಟಿಶ್ ಕಾದಂಬರಿಕಾರರ ಚಿತ್ರಣವನ್ನು ವಿರೋಧಿಸಲೆಂದು ಬರೆದದ್ದೇ 'ಥಿಂಗ್ಸ್ ಫಾಲ್ ಅಪಾರ್ಟ್' ಕಾದಂಬರಿ. "ಇಂಗ್ಲಿಷ್ ವಿದ್ಯಾಭ್ಯಾಸ ಪಡೆದ ಪ್ರತಿಭಾವಂತ ಕಪ್ಪು ತರುಣರು ತಮ್ಮ ಜನಜೀವನವನ್ನು ಕುರಿತು ಬಿಳಿಯರು ರಚಿಸಿದ ಸಾಹಿತ್ಯವನ್ನು ಉಗ್ರವಾಗಿ ವಿಮರ್ಶೆಗೆ ಒಳಪಡಿಸುವುದರ ಜೊತೆಗೆ ತಾವೇ ತಮ್ಮ ಕತೆಗಳನ್ನು ಇಂಗ್ಲೀಷಿನಲ್ಲಿ ಬರೆಯಲಾರಂಭಿಸಿದರು. ಇದುವರೆಗೂ ನೀವು (ಬಿಳಿಯರು) ನಮ್ಮ (ಕಪ್ಪು ಜನರ) ಕತೆಯನ್ನು ಹೇಳಿದ್ದು ಸಾಕು; ಈಗ ನಾವೇ ನಮ್ಮ ಕತೆ ಹೇಳುವುದನ್ನು ಕೇಳಿ"[1] ಎನ್ನುವ ಚಿನುಆ ಅಚಿಬೆ ವಸಾಹತುಶಾಹಿ ಅನುಭವವನ್ನು ಅರ್ಥೈಸಲು ಮತ್ತು ಪ್ರತಿರೋಧಿಸಲು ವಸಾಹತುಶಾಹಿ ಭಾಷೆಯನ್ನೇ ಬಳಸಿರುವುದನ್ನು ಸೂಕ್ಷ್ಮವಾಗಿ ಗಮನಿಸಬೇಕು.
1958ರಲ್ಲಿ ಪ್ರಕಟವಾದ 'ಥಿಂಗ್ಸ್ ಫಾಲ್ ಅಪಾರ್ಟ್' ಚಿನುಆ ಅಚಿಬೆಯ ಮೊದಲ ಕಾದಂಬರಿ. ನೈಜೀರಿಯ ಸ್ವಾತಂತ್ರ್ಯ ಪಡೆಯುವ ಎರಡು ವರ್ಷ ಮುನ್ನ ಪ್ರಕಟವಾದ ಕಾದಂಬರಿ. 1885ರಿಂದ 1960ರ ವರೆಗೆ ಬ್ರಿಟಿಷ್ ವಸಾಹತು ಕಾಲಾವಧಿಯಲ್ಲಿನ ದಬ್ಬಾಳಿಕೆಯಿಂದ ನಲುಗಿ ಹೋದ ದಾರುಣ ಕತೆಯನ್ನು ಕಟ್ಟಿಕೊಡುವ ಉದ್ದೇಶ ಇಲ್ಲಿದೆ. ಉಮೋಫಿಯಾ ಎಂಬ ಕಾಲ್ಪನಿಕ ಹಳ್ಳಿಯ ಸುತ್ತ ಕತೆ ಹೆಣೆಯಲ್ಪಟ್ಟಿದೆ. ಡಬ್ಲ್ಯೂ.ಬಿ.ಏಟ್ಸ್ ಕವಿಯ 'ದ ಸೆಕೆಂಡ್ ಕಮಿಂಗ್' ಕವಿತೆಯಿಂದ ಆಯ್ದ ಸಾಲು 'ಥಿಂಗ್ಸ್ ಫಾಲ್ ಅಪಾರ್ಟ್' ಕೃತಿಯ ಶೀರ್ಷಿಕೆ. ಏಟ್ಸ್ ಪ್ರತಿಯೊಂದು ನಾಗರಿಕತೆ ಹೊರಗಿನ ದಬ್ಬಾಳಿಕೆ ಮತ್ತು ಒಳಗಿನ ಒತ್ತಡಗಳಿಂದ ನಾಶವಾಗುತ್ತದೆಂದು ಪ್ರತಿಪಾದಿಸುತ್ತಾನೆ. ಇತಿಹಾಸ ಮತ್ತು ನಾಗರಿಕತೆ ಕುರಿತ ಏಟ್ಸ್‌ನ ಧೋರಣೆಯನ್ನು ಒಪ್ಪುವ ಚಿನುಆ ಅಚಿಬೆ ಆತನ ಕವಿತೆಯ ಸಾಲನ್ನು ಕಾದಂಬರಿಯ ಅರ್ಥಪೂರ್ಣ ಶೀರ್ಷಿಕೆಯನ್ನಾಗಿ ಸ್ವೀಕರಿಸಿರುವುದು ಸಹಜ.

ವಸಾಹತುಶಾಹಿ ಅನುಭವವನ್ನು ನಿರೂಪಿಸುವ ‘ಭಂಗ’ ಕಾದಂಬರಿ ಸಂಸ್ಕೃತಿಯೊಂದು ವಸಾಹತು ಆಕ್ರಮಣ ಮತ್ತು ತನ್ನೊಳಗಿನ ದೌರ್ಬಲ್ಯಗಳಿಂದಾಗಿ ‘ಭಂಗ’ಗೊಳ್ಳುವುದನ್ನು ಅತ್ಯಂತ ವಿಷಾದದಿಂದ ಚಿತ್ರಿಸುತ್ತದೆ. ವಸಾಹತುಶಾಹಿಯನ್ನು ವಿರೋಧಿಸಲೆಂದು ಬರೆದ ಕಾದಂಬರಿಯಾದರೂ ಅದನ್ನು ಮೀರಿದ ವಸಾಹತು ಆಕ್ರಮಣಶೀಲತೆ ಮತ್ತು ಸಂಸ್ಕೃತಿಯೊಳಗಿನ ವೈರುಧ್ಯಗಳೆರಡನ್ನೂ ಸಂಯಮದಿಂದ ನಿರೂಪಿಸಿರುವುದರಿಂದ ಕಾದಂಬರಿ ಸಂಸ್ಕೃತಿಯ ದುರಂತದ ಸಂಕೀರ್ಣ ಕಥನವಾಗಿದೆ.

‘ಭಂಗ’ ಕಾದಂಬರಿಯು ನೈಜೀರಿಯಾದಲ್ಲಿನ ಉಮೋಫಿಯಾ ಎಂಬ ಕಾಲ್ಪನಿಕ ಹಳ್ಳಿಯ ಸುತ್ತ ಹೆಣೆಯಲ್ಪಟ್ಟಿದೆ. ಬುಡಕಟ್ಟು ಜೀವನ ಕ್ರಮವೊಂದು ಹೊರಗಿನ ಆಕ್ರಮಣ ಮತ್ತು ತನ್ನೊಳಗಿನ ದೌರ್ಬಲ್ಯಗಳಿಂದ ಅವಸಾನ ಹೊಂದುವ ದುರಂತ ಕತೆ. ‘ಭಂಗ’ ಕಾದಂಬರಿಯ ಮುಖ್ಯ ಎಳೆ ನಾಯಕ ಒಕೊಂಕೊನ ದುರಂತ. ಒಕೊಂಕೊ ಸುತ್ತಲ ಒಂಬತ್ತು ಹಳ್ಳಿಗಳಾಚೆಯೂ ಪ್ರಸಿದ್ಧನಾಗಿದ್ದವನು. ಪೈಲ್ವಾನ್ ಅಮಲಿಂಜನನ್ನು ಸೋಲಿಸಿ, ಬಿರುದುಗಳನ್ನು ಪಡೆದವನು. ಈತನ ತಂದೆ ಯುನೋಕಾ. ತುಂಬಾ ಸೋಮಾರಿಯಾದ, ಆದರೆ ಕೊಳಲು ನುಡಿಸುವಲ್ಲಿ ನಿಪುಣ. ಮೈತುಂಬಾ ಸಾಲ ಹೊತ್ತೇ ತೀರಿ ಹೋದವನು. ತಂದೆಯ ಗುಣ ಸ್ವಭಾವಗಳನ್ನು ಒಪ್ಪದ ಒಕೊಂಕೊ ಅಪ್ಪನ ಗುಣಕ್ಕೆ ವಿರುದ್ಧವಾಗಿಯೇ ಬೆಳೆದವನು. ಒಕೊಂಕೊ ಚಿಕ್ಕ ವಯಸ್ಸಿನಲ್ಲೇ ಕುಸ್ತಿಪಟುವೆಂದು ಪ್ರಸಿದ್ಧನಾದವನು. ಪ್ರಗತಿಪರ ರೈತನಾಗಿ ತನ್ನ ಕುಲದ ಎರಡು ಬಿರುದುಗಳನ್ನು ಪಡೆದುಕೊಂಡಿದ್ದಾನೆ. ಈತನಿಗೆ ಮೂವರು ಹೆಂಡಿರು ಮತ್ತು ಹನ್ನೊಂದು ಮಕ್ಕಳಿದ್ದಾರೆ. ಒಮ್ಮೆ ಪಕ್ಕದ ಊರಾದ ಮಬೈನೋದ ಸಂತೆಗೆ ಹೋದ ಉಮೋಫಿಯಾದ ಹೆಣ್ಣುಮಗಳನ್ನು ಕೊಲ್ಲುತ್ತಾರೆ. ಈ ಸಂಘರ್ಷದ ನಿರ್ವಹಣೆಯನ್ನು ಒಕೊಂಕೊಗೆ ವಹಿಸುತ್ತಾರೆ. ಒಕೊಂಕೊ ಯುದ್ಧ ಮತ್ತು ರಕ್ತಪಾತವಿಲ್ಲದೆ ಸಂಘರ್ಷವನ್ನು ಬಗೆಹರಿಸಿ ಬಲಿದಾನವಾಗಿ ಇಕೆಮೆಫೂನ ಎಂಬ ಹುಡುಗ ಮತ್ತು ಓರ್ವ ಹುಡುಗಿಯನ್ನು ಕರೆತರುತ್ತಾನೆ. ಒಕೊಂಕೊ ತನ್ನ ಸ್ವಸಾಮರ್ಥ್ಯ ಮತ್ತು ಶ್ರದ್ಧೆಯಿಂದ ಯಶಸ್ಸು ಪಡೆದು ಬುಡಕಟ್ಟಿನ ಮುಖಂಡನಾಗಿ ರೂಪುಗೊಂಡವನು. ಆ ಕಾರಣಕ್ಕಾಗಿಯೇ ಬುಡಕಟ್ಟಿನ ಜನರಿಂದ ಅಪಾರ ಪ್ರೀತಿ ಗೌರವ ಸಂಪಾದಿಸಿದ್ದನು. ಬಲಿದಾನವಾಗಿ ಬಂದ ಇಕೆಮೆಫೂನಾ ಒಕೊಂಕೊನ ಮನೆಯ ಮಗನಂತಾದ. ಒಕೊಂಕೊ ಅಂತರಂಗದಲ್ಲಿ ಅವನನ್ನು ಬಹಳ ಇಷ್ಟಪಡುತ್ತಿದ್ದನು. ಅವನೂ ಕೂಡ ಅಪ್ಪ ಎಂದೇ ಕರೆಯುತ್ತಿದ್ದ. ಇಕೆಮೆಫೂನ ಒಕೊಂಕೊನ ಮನೆಗೆ ಬಂದು ಮೂರು ವರ್ಷಗಳಾದವು. ಒಕೊಂಕೊನ ಮಗ ನೋಯೆಗೆ ಹಿರಿಯಣ್ಣನಂತಿದ್ದ. ನೋಯೆನ ಬೆಳವಣಿಗೆ ಕಂಡು ಒಕೊಂಕೊ ಒಳಗೊಳಗೆ ಖುಷಿಪಡತೊಡಗಿದನು. ಇದಕ್ಕೆಲ್ಲಾ ಕಾರಣ ಇಕೆಮೆಫೂನಾ ಅಂತಲೂ ಗೊತ್ತು. ಸಮರ್ಥ ತರುಣನಾಗಿ ಬೆಳೆಯಬೇಕು, ಹೆತ್ತಮುತ್ತರಿಗೆ ಕಾಲ ಕಾಲಕ್ಕೆ ಅನ್ನ ಹಾಕಬಲ್ಲ ಶ್ರೀಮಂತರಾಗಬೇಕು ಎಂಬುದು ಒಕೊಂಕೊನ ಆಸೆ. ನೋಯೆ ಹೆಂಗಸರ ಬಗ್ಗೆ ಗೊಣಗುವಾಗಲೆಲ್ಲ ಒಕೊಂಕೊಗೆ ಖುಷಿಯಾಗುತ್ತಿತ್ತು. ಏಕೆಂದರೆ ಮುಂದೆ ಹೆಂಡತಿಯನ್ನು ನಿಯಂತ್ರಿಸಬಲ್ಲವನಾಗುತ್ತಾನೆ ಎಂದು ತಿಳಿದಿದ್ದ. ಒಕೊಂಕೊ ತನ್ನ ಹಟ್ಟಿಯ ಹುಡುಗರಿಗೆ ಹಿಂಸೆ, ರಕ್ತಪಾತದ ಕತೆಗಳನ್ನು ಗಮನವಿಟ್ಟು ಕೇಳುವಂತೆ ಪ್ರೋತ್ಸಾಹಿಸುತ್ತಿದ್ದ. ಆದರೆ ನೋಯೆಗೆ ಪೌರುಷ ಮತ್ತು ಹಿಂಸೆಯನ್ನು ಪ್ರದರ್ಶಿಸುವುದು ಸರಿ ಮಾರ್ಗವೆನಿಸಿದರೂ ಅವನಿಗೆ ಅವನ ಅಮ್ಮ ಮೊದಲು ಹೇಳುತ್ತಿದ್ದ ಕುಯುಕ್ತಿ ಆಮೆ ಕತೆ, ಅಹಂಕಾರದ ಪಕ್ಷಿ ಕತೆ, ಭೂಮಿ ಆಕಾಶದ ಜಗಳದ ಕತೆಗಳೇ ಪ್ರಿಯವಾಗುತ್ತಿದ್ದವು.

ಸ್ವಂತ ಸಾಮರ್ಥ್ಯದಿಂದ ಇಡೀ ಬುಡಕಟ್ಟಿನ ಮುಖಂಡನಾಗಿದ್ದ ಒಕೊಂಕೊನ ದುರಂತದ ಪ್ರಾರಂಭವನ್ನು ಒಮ್ಮೆ ನೆಂಟರ ಸಭೆಯೊಂದರಲ್ಲಿ ಒಸುಗ ಎಂಬ ಯುವಕನಿಗೆ ಅವಮಾನಿಸುವ ಪ್ರಸಂಗದಲ್ಲಿ ಸೂಕ್ಷ್ಮವಾಗಿ ಗುರುತಿಸಬಹುದು. ಅಯಶಸ್ಸಿನವರನ್ನು ನಿಕೃಷ್ಟವಾಗಿ ಕಾಣುವ ಸ್ವಭಾವ ಒಕೊಂಕೊನದು. ಆದರೆ ಅಂದು ನೆರೆದಿದ್ದ ಹಿರೀಕರು ಒಕೊಂಕೊನ ನಡೆಯನ್ನು ಒಪ್ಪದೇ ಅವನಿಂದ ಕ್ಷಮೆಯಾಚಿಸುತ್ತಾರೆ. ಎರಡನೆಯದಾಗಿ ಬುಡಕಟ್ಟಿನ ಶಾಂತಿ ಸಪ್ತಾಹದಲ್ಲಿ ತನ್ನ ಚಿಕ್ಕ ಹೆಂಡತಿಯನ್ನು ಬಾಸುಂಡೆ ಬರುವ ಹಾಗೆ ಹೊಡೆದು ಭಂಗಗೊಳಿಸುತ್ತಾನೆ. ಹೀಗೆ ನಡೆದುಕೊಳ್ಳುವುದು ನಿಷಿದ್ಧ. ಇದರಿಂದ ಭೂತಾಯಿ ಸರ್ವನಾಶ ಮಾಡುತ್ತಾಳೆ ಎಂಬ ನಂಬಿಕೆ ಅವರಲ್ಲಿದೆ. ಮೂರನೆಯದಾಗಿ ಇಕೆಮೆಫೂನನ ಕೊಲೆಯಲ್ಲಿ ಭಾಗಿಯಾದದ್ದು. ತನ್ನ ಮಿತ್ರನ ಮಾತಿಗೆ ಕಿವಿಗೊಡದೆ ಬುಡಕಟ್ಟಿನ ಕಟ್ಟಳೆಯನ್ನು ಮುಖಂಡನಾಗಿ ಪಾಲಿಸಬೇಕೆಂಬ ಕಾರಣಕ್ಕಾಗಿ ತೆರಳಿದ್ದು ಅವನಿಗೆ ಅರಿವಿಗೆ ಬಾರದಂತೆ ದುರಂತದ ಹಾದಿ ಹಿಡಿದುದನ್ನು ಕಾಣಬಹುದು. ನಾಲ್ಕನೆಯದು ಶವಸಂಸ್ಕಾರ ಸಂದರ್ಭದಲ್ಲಿ ಗೌರವಕ್ಕಾಗಿ ತೋಪು ಹಾರಿಸುವಾಗ ಆಕಸ್ಮಿಕವಾಗಿ ಬಂದೂಕಿನಿಂದ ಹಾರಿ ಬಂದ ಕಬ್ಬಿಣದ ಚೂರೊಂದು ಬಾಲಕನಿಗೆ ಬಡಿದು ಸಾಯುತ್ತಾನೆ. ಈ ಅಪರಾಧಕ್ಕಾಗಿ ಏಳು ವರ್ಷಗಳ ಕಾಲ ದೇಶಭ್ರಷ್ಟನಾಗಿ ತನ್ನ ತಾಯಿಯ ತವರೂರಲ್ಲಿ ನೆಲೆಸುತ್ತಾನೆ. ಐದನೆಯದಾಗಿ ಉಮೋಫಿಯಾದ

ಜನರು ಚರ್ಚ್ ನೆಲಸಮ ಮಾಡುವ ಘಟನೆ. ಅದರ ಸಂಬಂಧ ಒಕೊಂಕೊ ಸೇರಿ ಇಬೋ ಬುಡಕಟ್ಟಿನ ಆರು ಜನರನ್ನು ಬಂಧಿಸಿ, ತಲೆ ಬೋಳಿಸಿ ದಂಡ ವಿಧಿಸುತ್ತಾರೆ. ಬುಡಕಟ್ಟಿನ ನೇತಾರನಾಗಿ ಒಕೊಂಕೊಗೆ ಆದ ಬಹುದೊಡ್ಡ ಅವಮಾನ. ಸ್ಥಳೀಯ ಬುಡಕಟ್ಟು ಸಮುದಾಯಗಳ ಜನರು ತಮ್ಮೊಳಗಿನ ತಪ್ಪುಗಳನ್ನು ತಮ್ಮದೇ ನ್ಯಾಯ ಪದ್ಧತಿ ಮೂಲಕ ಬಗೆಹರಿಸಿಕೊಂಡು ಬದುಕುತ್ತಿದ್ದ ಜೀವನ ಕ್ರಮವನ್ನೇ ವಸಾಹತುಶಾಹಿ ದಮನ ಮಾಡುವುದನ್ನು ಕಾದಂಬರಿ ಕಟ್ಟಿಕೊಡುತ್ತದೆ. ಬುಡಕಟ್ಟಿನ ಮುಖಂಡನ ತಲೆ ಬೋಳಿಸುವುದು ಅದರ ತೀವ್ರತೆಯನ್ನು ಸೂಚಿಸುತ್ತದೆ.

ಆರನೆಯದಾಗಿ ಒಂಬತ್ತು ಗ್ರಾಮಗಳ ಜನ ಸಭೆ ಸೇರಿದ್ದನ್ನು ಬ್ರಿಟಿಶ್ ಆಡಳಿತದ ಒಲೆಕಾರ ಕೂಟ ನಡೆಸಬಾರದೆಂದು ಆಜ್ಞೆಯಾಗಿದೆಯೆಂದು ತಿಳಿಸುತ್ತಾನೆ. ಆಗ ನಡೆದ ಸಂಘರ್ಷದಲ್ಲಿ ಒಕೊಂಕೊ ಕತ್ತಿಯಿಂದ ಅವನ ಕತ್ತು ಕತ್ತರಿಸುತ್ತಾನೆ. ಇದರೊಂದಿಗೆ ಒಕೊಂಕೊ ಅಂತ್ಯ ಸಮೀಪಿಸಿತೆಂದೇ ಹೇಳಬಹುದು. ಮರುದಿನ ಸೈನಿಕರೊಂದಿಗೆ ಜಿಲ್ಲಾಧಿಕಾರಿ ಅವನನ್ನು ನ್ಯಾಯಾಲಯದ ಆದೇಶದ ಮೇರೆಗೆ ಬಂದಿಸಲು ಬರುತ್ತಾರೆ. ಒಕೊಂಕೊನ ಹಟ್ಟಿಯ ಬಳಿ ಬಂದು ಹೊರ ಬರುವಂತೆ ಆಜ್ಞೆ ಮಾಡುತ್ತಾರೆ. ಎಷ್ಟು ಹೊತ್ತು ಕೂಗಿ ಕರೆದರೂ ಹೊರಬಾರದಿದ್ದಾಗ ಒಳಪ್ರವೇಶಿಸಿ ನೋಡುತ್ತಾರೆ. ಅಲ್ಲಿ ಮರದ ಬಳಿ ಒಕೊಂಕೊನ ಹೆಣ ನೇತಾಡುತ್ತಿತ್ತು. ಬುಡಕಟ್ಟಿನ ಪ್ರಕಾರ ಆತ್ಮಹತ್ಯೆ ಮಾಡಿಕೊಳ್ಳುವುದು ಭೂಮಿತಾಯಿಗೆ ಮಾಡಿದ ಪಾಪ. ಅದರಿಂದ ಅಂತವನನ್ನು ಕುಲದವರು ಮುಟ್ಟುವುದಿಲ್ಲ, ಹೂಳುವುದಿಲ್ಲ. ಹೀಗೆ ಬುಡಕಟ್ಟಿನ ಮುಖಂಡನಾದವನು ಶವಸಂಸ್ಕಾರವು ಸಿಗದೇ ಹೋದದ್ದು ಕಾದಂಬರಿ ಧ್ವನಿಸುವ ವ್ಯಂಗ್ಯ ಎಂದೇ ಹೇಳಬಹುದು.

ಕಾದಂಬರಿಯಲ್ಲಿನ ಸ್ತ್ರೀ ಪಾತ್ರಗಳು ಬುಡಕಟ್ಟಿನ ಅಡಿಪಾಯವಾದ ಮಾತೃ ಪ್ರಧಾನ ಮೌಲ್ಯಗಳನ್ನು ಪ್ರತಿನಿಧಿಸಿವೆ. ಒಕೊಂಕೊನ ಮೂವರು ಹೆಂಡತಿಯರು ಹನ್ನೊಂದು ಮಕ್ಕಳನ್ನು ಒಳಗೊಂಡಂತೆ ಹೆಂಗಸರ ಜಗತ್ತು ಜೀವಪರ ಲೋಕದೃಷ್ಟಿಯ ಪ್ರತೀಕವಾಗಿರುವುದನ್ನು ಕಾಣಬಹುದು. ಅನನ್ಯ ಜೀವನ ಪ್ರೀತಿಯ ಸಾಧ್ಯತೆಗಳನ್ನು ಇಲ್ಲಿನ ಸ್ತ್ರೀ ಪಾತ್ರಗಳು ತೋರಿಸಿ ಕೊಡುತ್ತವೆ. ಒಕೊಂಕೊನ ಎರಡನೆಯ ಹೆಂಡತಿ ಎಕ್ವೆಫಿ. ಅತ್ಯಂತ ಸುಂದರಳಾದ ಈಕೆಯನ್ನು ಮದುವೆಯಾಗಲು ಒಕೊಂಕೊ ಬಳಿ ಹಣವಿರದ ಕಾರಣ ಬೇರೆ ಒಬ್ಬಾತನನ್ನು ಮದುವೆಯಾಗಿದ್ದವಳು. ಮುಂದೆ ಒಕೊಂಕೊ ಕುಸ್ತಿಪಟುವಾಗಿ, ಮುಖಂಡನಾಗಿ ಪ್ರಸಿದ್ಧನಾಗುತ್ತಿದ್ದಂತೆ ಎಕ್ವೆಫೀ ಗಂಡನನ್ನು ಬಿಟ್ಟು ಬಂದು ಒಕೊಂಕೊನನ್ನು ಸೇರುತ್ತಾಳೆ. ಇವರಿಬ್ಬರ ಪ್ರೀತಿಯ ಮಗಳು ಎಜಿನ್ಮಾ. ಈಕೆ ಕಾಯಿಲೆಯಿಂದ ಬಳಲುತ್ತಿದ್ದಾಗ ಗಂಡ ಹೆಂಡಿರು ಸೇರಿ ಉಪಚರಿಸಿದ ಬಗೆ ಎಜಿನ್ಮಾ ಅವರಲ್ಲಿ ಪ್ರೀತಿಯ ಸಿಂಚನ ಹರಿಸಿದ್ದನ್ನು ಸೂಚಿಸುತ್ತದೆ. ತನ್ನ ತಾಯಿಯನ್ನು ಹೆಸರಿಡದೇ ಮಾತನಾಡಿಸುವಾಕೆ. ಅಮ್ಮನ ಮನೆಗೆಲಸದಲ್ಲಿ ನೆರವಾಗುವುದರ ಜೊತೆಗೆ ಆಕೆಯ ನೋವಿನ ಕತೆಗಳಲ್ಲಿ, ಗುಟ್ಟುಗಳಲ್ಲಿ ಭಾಗಿಯಾಗುತ್ತಾಳೆ. ಎಜಿನ್ಮಾ ಮಗಳಾಗಿ, ಗೆಳತಿಯಾಗಿ ಸುತ್ತಮುತ್ತಲಿನ ಜನರ ಪ್ರೀತಿಗೆ ಪಾತ್ರಳಾಗುತ್ತಾಳೆ. ಎಜಿನ್ಮಾ ಒಬ್ಬಳೇ ಮಗಳು ಅಮ್ಮನ ಸರ್ವಸ್ವವಾಗಲು ಕಾರಣ ಒಂಬತ್ತು ಮಕ್ಕಳು ಎಳೆಯದರಲ್ಲೇ ಸತ್ತದ್ದು. ಅವಳು ಮಕ್ಕಳಿಗೆ ಇಟ್ಟ ಹೆಸರುಗಳಲ್ಲಿ ಅವಳ ಜಿಗುಪ್ಸೆಯ ಆಳ ಎಷ್ಟು ಎಂಬುದು ಅರಿವಾಗುತ್ತದೆ.

‘ಭಂಗ’ ಕಾದಂಬರಿಯು ಇಬೋ ಬುಡಕಟ್ಟು ಸಂಸ್ಕೃತಿಯ ಸಮೃದ್ಧ ವಿವರಗಳ ಸಂಕಥನ. ಬುಡಕಟ್ಟಿನ ವಿಶಿಷ್ಟ ಆಚರಣೆಗಳು, ನಂಬಿಕೆಗಳು, ಕೃಷಿ, ಕೌಟುಂಬಿಕ ವ್ಯವಸ್ಥೆ, ವಿವಾಹ ಪದ್ಧತಿ, ಹುಟ್ಟು-ಸಾವಿನ ಆಚಣೆಗಳು, ದೈವಾರಾಧನೆ, ಕೌಟುಂಬಿಕ ಮತ್ತು ಸಮುದಾಯಗಳ ನಡುವಿನ ಜಗಳಗಳು, ಹಬ್ಬಗಳು, ಕುಸ್ತಿಪಂದ್ಯ, ಮಾಟ-ಮಂತ್ರ, ಕೊಳ್ಳಿ ದೆವ್ವಗಳು, ಆಹಾರ ಪದ್ಧತಿ, ಕುಡಿತ ಮುಂತಾದ ವಿವರಗಳ ಮೂಲಕ ಕಾದಂಬರಿ ಬುಡಕಟ್ಟಿನ ಸಾಂಸ್ಕೃತಿಕ ವೈಶಿಷ್ಟ್ಯವನ್ನು ಚಿತ್ರಿಸುತ್ತದೆ. ಚಿನುಆ ಅಚಿಬೆ ಇಬೋ ಸಂಸ್ಕೃತಿಯ ದಟ್ಟ ವಿವರಗಳನ್ನು ಕಟ್ಟಿಕೊಡುವಾಗ ವೈಭವೀಕರಣವಾಗಲೀ, ಕಡೆಗಣಿಸುವುದಾಗಲೀ ಮಾಡದೆ ಸಮಚಿತ್ತದಿಂದ ನಿರೂಪಿಸಿರುವುದು ವಿಶಿಷ್ಟವಾಗಿದೆ. ಕಾದಂಬರಿಯ ನಿರೂಪಣೆಯ ಶೈಲಿ ಕೂಡ ಅನನ್ಯವಾದುದು. ಹಲವು ಉಪಕತೆಗಳಿಂದ ಕೂಡಿದ್ದು, ಕತೆಯೊಳಗೊಂದು ಕತೆ, ಹಿನ್ನೋಟ ತಂತ್ರಗಳ ಮೂಲಕ ಬುಡಕಟ್ಟು ಭಾಷೆಯ ನುಡಿಗಟ್ಟಿನೊಂದಿಗೆ ನಿರೂಪಿತವಾಗಿದೆ. ವಸಾಹತುಶಾಹಿಯನ್ನು ಪ್ರತಿಭಟಿಸಲೆಂದು ಹೊರಟ ಚಿನುಆ ಅಚಿಬೆ ಅಪ್ಪಟ ಸೃಜನಶೀಲತೆಯಿಂದಾಗಿ ಪ್ರತಿರೋಧವನ್ನು ಮೀರಿದ ವಸಾಹತು ಆಕ್ರಮಣದಿಂದ ತತ್ತರಿಸಿದ ಸಂಸ್ಕೃತಿಯೊಂದು ತನ್ನೊಳಗಿನ ವೈರುಧ್ಯ ಮತ್ತು ಅಮಾನವೀಯ ಪದ್ಧತಿಗಳಿಂದಾಗಿ ಛಿದ್ರಗೊಂಡ ಬಗೆಯನ್ನು ಶೋಧಿಸುತ್ತದೆ. ವಸಾಹತುಶಾಹಿ ಪ್ರವೇಶದೊಂದಿಗೆ ಸಂಸ್ಕೃತಿಯ ದುರಂತ ಪ್ರಾರಂಭವಾದುದನ್ನು ಗುರುತಿಸಬಹುದು. ಒಕೊಂಕೊ ದೇಶಭ್ರಷ್ಟನಾಗಿ ತನ್ನ ತಾಯಿಯ ತವರೂರಲ್ಲಿ ನೆಲೆಸಿರುವಾಗಲೇ ಉಮೋಫಿಯಾಕ್ಕೆ ವಸಾಹತುಶಾಹಿ ಆಗಮನವಾಗುತ್ತದೆ. ಮತ ಪ್ರಚಾರಕರೊಂದಿಗೆ ಅವರದ್ದೇ ಆದ ವ್ಯಾಪಾರ, ಕಾನೂನು ವ್ಯವಸ್ಥೆ, ನ್ಯಾಯ ವ್ಯವಸ್ಥೆಯೊಂದಿಗೆ

ಬಂದು ಸ್ಥಳೀಯ ಬದುಕನ್ನು ಆವರಿಸಿಕೊಳ್ಳುವುದನ್ನು ಕಾಣಬಹುದು.

ಮಬಾಂಟ ಪ್ರವೇಶಿಸಿದ ಕ್ರೈಸ್ತಮಿಶನರಿಗಳು ನಾಲ್ಕೈದು ರಾತ್ರಿ ಸಂತೆಮಾಳದಲ್ಲಿ ಕಳೆದು, ಊರೊಳಗೆ ಪ್ರವೇಶಿಸಿ ಮುಖಂಡರ ಮನವೊಲಿಸಿ 'ಕೆಟ್ಟಕಾಡ'ನ್ನು ಪಡೆದು ಅಲ್ಲಿ ಚರ್ಚ್ ನಿರ್ಮಿಸುತ್ತಾರೆ. ಒಕೊಂಕೊನ ಮಗ ನೋಯೆ ಕ್ರೈಸ್ತಮತ ಸೇರಿದ್ದಾನೆ. ಬುಡಕಟ್ಟಿನ ಮತ್ತೋರ್ವ ಯುವಕ ಕಿಯಗ ದುಭಾಷಿ, ಶಿಕ್ಷಕನಾಗಿ ನೇಮಕಗೊಂಡಿದ್ದಾನೆ. ರೈತ ಅಮಾದಿಯ ಗರ್ಭಿಣಿ ಹೆಂಡತಿ ನನೇಕ ಮತಾಂತರ ಹೊಂದಿದ ಮೊದಲ ಮಹಿಳೆ. ನನೇಕ ಪ್ರತಿಬಾರಿ ಅವಳಿ ಮಕ್ಕಳನ್ನು ಹಡೆದ ತಕ್ಷಣ ಅವುಗಳನ್ನು 'ಕೇಡಿನ ಕಾಡಿಗೆ' ಎಸೆದು ನೊಂದವಳು. ಅವಳಿ ಮಕ್ಕಳು ಜನಿಸಿದರೆ ಕೇಡು ಎಂದು ನಂಬಿರುವ ಇಬೋ ಜನರಲ್ಲಿ ಎಳೆಯ ಮಕ್ಕಳನ್ನು 'ಕೇಡಿನ ಕಾಡಿಗೆ' ಎಸೆಯುವ ಕ್ರೂರ ಪದ್ಧತಿಯಿದೆ. ಸಂಸ್ಕೃತಿಯೊಳಗಿನ ಇಂತಹ ಕ್ರೂರ ಪದ್ಧತಿಗಳಿಂದಾಗಿ ನೊಂದ ಜನರಿಗೆ ಕೆಟ್ಟ ಕಾಡಿನಲ್ಲಿ ಚರ್ಚ್ ನಿರ್ಮಾಣ ಹಾಗು ಅಲ್ಲಿನ ಪ್ರಾರ್ಥನೆ "ಇಬೋ ಮನುಷ್ಯನೊಬ್ಬನ ಅಂತರಂಗದ ಮೌನವೂ, ಧೂಳುಮಯವೂ ಆದ ತಂತುಗಳನ್ನು ಮೀಟಬಲ್ಲಂಥ ಹರ್ಷೋಲ್ಲಾಸದ ರಾಗದಿಂದ ಕೂಡಿದ ಹಾಡದು".[2] ಕತ್ತಲು ಮತ್ತು ಭಯದಲ್ಲಿ ಮುಳುಗಿ ದೇವರ ಪ್ರೀತಿಯ ಅರಿವಿಲ್ಲದೆ ಇದ್ದಂಥ ಸಹೋದರರ ಕಥೆ, ಮೇಕೆಯ ಕಥೆ, ಏಸುಕ್ರಿಸ್ತನ ಕಥೆ ಇವೆಲ್ಲದರಿಂದ ನೋಯೆ ಸಂಪೂರ್ಣ ವಶನಾಗಿದ್ದ. ಇಬ್ಬರು ಸೋದರರ ಕಥೆ ಅವನನ್ನು ಚಿಕ್ಕ ವಯಸ್ಸಿನಿಂದ ಕಾಡಿದ್ದ ಅಸ್ಪಷ್ಟ ಪ್ರಶ್ನೆಗಳಿಗೆ ಉತ್ತರದಂತೆ ತೋರಿತು. ಹುಟ್ಟಿದ ಅವಳಿ ಜವಳಿ ಮಕ್ಕಳನ್ನು ಹೊರಗೆ ಎಸೆಯುವುದು, ಇಕೆಮೆಫೂನಾ ಅಂಥವರು ಬಲಿ ಮುಂತಾದ ಅಮಾನವೀಯ ಆಚರಣೆಗಳಿಂದ ಗಲಿಬಿಲಿಗೊಂಡಿದ್ದ ನೋಯೆನ ಎಳೆಯ ಮನಸ್ಸಿಗೆ "ಆ ಪ್ರಾರ್ಥನ ಗೀತಗಳು ಪದಗಳು ಬಿರಿದ ನೆಲದ ಬಾಯಿಗೆ ಬೀಳುವ ಆಲಿಕಲ್ಲುಗಳಂತೆ ಹಾಯೆನಿಸಿದವು".[3]

ಮಬಾಂಟದಲ್ಲಿ ಆರಂಭವಾದ ಹೊಸ ಚರ್ಚ್, ಮಿಶನರಿಗಳ ಪ್ರಚಾರದ ಜೊತೆಗೆ ಅವರದ್ದೇ ಆದ ಸರ್ಕಾರ, ನ್ಯಾಯಾಲಯ ವ್ಯವಸ್ಥೆಯನ್ನು ತಂದಿರುವ ಸುದ್ದಿ ಬುಡಕಟ್ಟು ಜನರನ್ನು ದಿಗಿಲುಗೊಳಿಸಿತು. ಅಸ್ಪೃಶ್ಯರು ಮತ್ತು ಕಾಡಿಗೆ ಎಸೆಯುವ ಮಕ್ಕಳನ್ನು ಪಡೆಯಲು ಮುಂದಾದುದು ತಮ್ಮ ದೇವರ ನಂಬುಗೆಗೆ ವಿರುದ್ಧವಾದುದೆಂದೂ, ದೇವರು ದೇವರುಗಳ ಸಮರ ಎಂದೂ ಕೆಲವರು ನಿರ್ಲಕ್ಷಿಸಿದರು. ತಮ್ಮ ಸಂಸ್ಕೃತಿಯೊಳಗಿನ ಕೆಲವು ಆಚರಣೆಗಳಿಂದ ಬೇಸತ್ತಿದ್ದ ಜನರು ಇದು ಬಿಡುಗಡೆಯ ಹಾದಿ ಎಂದು ಮತಾಂತರ ಹೊಂದಿದರು. ಬ್ರಿಟಿಶ್ ಆಡಳಿತ ಹೊಸ ಧರ್ಮದ ಜೊತೆಗೆ ಪ್ರಾರಂಭಿಸಿದ ಶಾಲೆ, ಆಸ್ಪತ್ರೆ, ಮಾರುಕಟ್ಟೆ ಬುಡಕಟ್ಟಿನ ಜನಜೀವನ ಕ್ರಮವನ್ನು ಬದಲಾವಣೆಯತ್ತ ಕೊಂಡೊಯ್ದವು. ಏಳು ವರ್ಷಗಳ ಕಾಲ ದೇಶಭ್ರಷ್ಟನಾಗಿದ್ದ ಬುಡಕಟ್ಟು ಮುಖಂಡ ಒಕೊಂಕೊ ಮರಳುತ್ತಾನೆ. ಅಷ್ಟರಲ್ಲಿ ಅವನ ಮಗ ನೋಯೆ ಮತಾಂತರ ಹೊಂದಿದ್ದಾನೆ. ಇದು ಒಕೊಂಕೊಗೆ ಆಘಾತವನ್ನುಂಟುಮಾಡುತ್ತದೆ. ಒಡೆದು ಛಿದ್ರವಾಗುತ್ತಿದ್ದ ಬುಡಕಟ್ಟಿಗಾಗಿ ದುಃಖಿಸಿದನು. ಮತ್ತೆ ಕೆಲವರು ವಸಾಹತುಶಾಹಿಯನ್ನು ಪ್ರತಿಭಟಿಸಲಾಗದೆ ದುರ್ಬಲರಾಗಿದ್ದಾರೆ. ತನ್ನ ಗೈರುಹಾಜರಿಯಲ್ಲಿ ಬುಡಕಟ್ಟಿನಲ್ಲಾದ ಬದಲಾವಣೆಗಳನ್ನು ಅರಿಯದ ಒಕೊಂಕೊ ಬಿಳಿಯರ ವಿರುದ್ಧ ಹೋರಾಡಲು ಸಿದ್ಧನಾಗುತ್ತಾನೆ. ಬಿಳಿಯರ ಪೋಲಿಸ್, ನ್ಯಾಯಾಂಗ ವ್ಯವಸ್ಥೆಯ ಕಬಂಧ ಬಾಹುಗಳಿಗೆ ಸಿಲುಕಿದ ಒಕೊಂಕೊ ಅದನ್ನು ಎದುರಿಸಲಾರದೆ ಆತ್ಮಹತ್ಯೆ ಮಾಡಿಕೊಳ್ಳುತ್ತಾನೆ. ಬುಡಕಟ್ಟಿನ ಸಂಪ್ರದಾಯದಂತೆ ಶವಸಂಸ್ಕಾರ ಕೂಡ ಮಾಡುವಂತಿಲ್ಲ. ಇಬೋ ಸಮಾಜದ ಮುಖಂಡ ಶವಸಂಸ್ಕಾರವೂ ಸಿಗದ ಸ್ಥಿತಿಯಲ್ಲಿ ಸಾಯುತ್ತಾನೆ. ಸ್ಥಳೀಯ ಸಂಸ್ಕೃತಿಗಳು ತಮ್ಮೊಳಗಿನ ವೈರುಧ್ಯಗಳನ್ನು, ಲೋಪಗಳನ್ನು ಕಾಲಕ್ರಮೇಣ ನೇರ್ಪುಗೊಳಿಸಿಕೊಂಡು ಬದುಕುವ ಸಾಧ್ಯತೆಗಳನ್ನು ವಸಾಹತು ಆಕ್ರಮಣ ನಾಶಮಾಡುವ ಪರಿಯನ್ನು ಚಿನುಆ ಅಚಿಬೆ ಅವರ 'ಭಂಗ' ಕಾದಂಬರಿ ಅತ್ಯಂತ ಮನೋಜ್ಞವಾಗಿ ಚಿತ್ರಿಸಿದೆ.

## ಕೊನೆ ಟಿಪ್ಪಣಿಗಳು

1. ಪುಸ್ತಕ ಸನ್ನಿಧಿ, ಅಶೋಕ ಟಿ.ಪಿ ಪುಟ.70
2. ಭಂಗ ಡಾ.ಸಿ.ನಾಗಣ್ಣ ಪುಟ 140
3. ಭಂಗ ಡಾ.ಸಿ.ನಾಗಣ್ಣ ಪುಟ 141

## ಆಕರ ಕೃತಿ

1. ಡಾ.ಸಿ.ನಾಗಣ್ಣ, ಭಂಗ, (ಮೂಲ: ಚಿನುಆ ಅಚಿಬೆ), ವಿಜಯಲಕ್ಷ್ಮಿ ಪ್ರಕಾಶನ, ಮೈಸೂರು-2017

## ಪರಾಮರ್ಶನ ಗ್ರಂಥಗಳು


1. ಅಶೋಕ ಟಿ.ಪಿ –ಪುಸ್ತಕ ಸನ್ನಿಧಿ, ವಸಂತ ಪ್ರಕಾಶನ, ಬೆಂಗಳೂರು-2013
2. ರಾಜೇಂದ್ರ ಚೆನ್ನಿ -ಕಾಲ ಕಥನ, ಪಲ್ಲವ ಪ್ರಕಾಶ, ಚನ್ನಪಟ್ಟಣ-2011
3. ಲಂಕೇಶ್ ಪಿ -ಟೀಕೆ ಟಿಪ್ಪಣಿ, ಪತ್ರಿಕೆ ಪ್ರಕಾಶನ, ಬೆಂಗಳೂರು-1998